



# ಹೊಳಲಮ್ಮನ ಗುಡ್ಡದ ಮೇಲೆ..

ಇದು ಗದಗ ಜಿಲ್ಲೆಯ ಯುದ್ಧ ಭೂಮಿ. ಇಲ್ಲಿನ ಕೋಟೆಗೆ ಕಾಯಕಲ್ಪ ಮಾಡಿದರೆ ಚಾರಣಪ್ರಿಯರ ಮನತಣಿಸುವ ತಾಣ ಇದಾಗಬಹುದು.

■ ಚಿತ್ರ– ಲೇಖನ:
**ಚಂದ್ರಹಾಸ ಚಾರ್ಮಾಡಿ**

೧೭ನೇ ಶತಮಾನದಲ್ಲಿ ಈಗಿನ ಶಿರಹಟ್ಟಿ ತಾಲೂಕಿನ ಹೊಳಲಮ್ಮನ ಗುಡ್ಡದ ಪಕ್ಕದಲ್ಲಿರುವ ಶ್ರೀಮಂತಗಡ ಸಾಮ್ರಾಜ್ಯ ರಣದುಲ್ಲಾ ಖಾನ್‌ನ ಒಡೆತನದಲ್ಲಿತ್ತು. ರಣದುಲ್ಲಾ ಖಾನ್ ಈ ಸಾಮ್ರಾಜ್ಯದ ಕೊನೆಯ ಅರಸ ಎಂಬುದನ್ನು ನಾವು ಪುಸ್ತಕದಲ್ಲಿ ಓದಿ ತಿಳಿದಿದ್ದೇವೆ. ಶಿವಾಜಿ ಮಹಾರಾಜ ಮತ್ತು ರಣದುಲ್ಲಾ ಖಾನನಿಗೆ ಯುದ್ಧ ನಡೆದ ಈ ಭೂಮಿ ಇಂದಿಗೂ ಜಗತ್ಪ್ರಸಿದ್ಧ. ರಣಗಟ್ಟೆವ್ವನ ದಿಬ್ಬ ಅಥವಾ ಹೊಳಲಮ್ಮನ ಗುಡ್ಡ ಎಂಬ ಹೆಸರಿನಿಂದ ಇದು ಖ್ಯಾತಿ.

ರಣದುಲ್ಲಾ ಖಾನನ ಕೋಟೆಯ ಫಕ್ಕದಲ್ಲೇ ಹೊಳಲಮ್ಮದೇವಿಯ ಬೆಟ್ಟವಿದೆ. ಪುರಾತನ ಕಾಲದಲ್ಲಿ ಈ ಬೆಟ್ಟದ ಮೇಲೆ ಕಪಿಲಾ ಮಹಾಮುನಿ ತಪಸ್ಸು ಮಾಡಿದ್ದರಂತೆ. ಆ ಮಹಾಮುನಿಗಳ ತಪೋಬಲದಿಂದ ಬೆಟ್ಟದ ಮೇಲೆ ದೇವಿ ನೆಲೆಸಿದರು ಎಂಬ ನಂಬಿಕೆ ಒಂದೆಡೆಯಾದರೆ, ರಣದುಲ್ಲಾ ಖಾನ್ ಅಪಾರ ಸಿರಿಸಂಪತ್ತನ್ನು ಹೊಂದಿದ್ದು ಅದನ್ನು ರಕ್ಷಿಸಿಕೊಳ್ಳಲು ಈ ಬೆಟ್ಟ ಸೂಕ್ತವೆಂದು ಆಯ್ಕೆ ಮಾಡಿಕೊಂಡ. ಬೆಟ್ಟದ ಸುತ್ತಲೂ ಬೃಹದಾಕಾರದ ಕೋಟೆಯನ್ನು ನಿರ್ಮಿಸಿ ಅಲ್ಲಿ ತನ್ನ ಅಪಾರ ಸಿರಿಸಂಪತ್ತಿನ ಕಾವಲಿಗಾಗಿ ದೇವಿಯನ್ನು ವಶೀಕರಣ ಮಾಡಿಕೊಂಡು ಅಲ್ಲಿ ಹೊನ್ನಮ್ಮನ ಗುಡಿಯನ್ನು ಕಟ್ಟಿದ ಎನ್ನುವುದು ಇತಿಹಾಸದ ಪುಟಗಳಲ್ಲಿ ಸಿಗುವ ದಾಖಲೆ. ರಣದುಲ್ಲಾ ಖಾನನ ಎಲ್ಲಾ ಸಿರಿ ಸಂಪತ್ತು ಹೊನ್ನಮ್ಮನ ಗುಡಿಯಲ್ಲಿದೆ ಎನ್ನುವ ಕಾರಣ ಇಲ್ಲಿಗೆ ಶ್ರೀಮಂತಗಢವೆಂಬ ಹೆಸರು ಹಿಂದಿನಿಂದಲೂ ಇದೆ.

ದೂರದಿಂದ ನೋಡುವಾಗ ಬೆಟ್ಟದಂತೆ ಕಂಡರೂ ಅಲ್ಲಿಗೆ ವಾಹನದಲ್ಲಿ ಪ್ರಯಾಣಿಸಲು ಮಾರ್ಗದ ವ್ಯವಸ್ಥೆಯಿದೆ. ಕೋಟೆಯ ಪಕ್ಕದಲ್ಲಿ ಹೊಳಲಮ್ಮದೇವಿ ದೇವಾಲಯವಿದೆ. ಪ್ರತಿವರ್ಷ ಮಹಾನವಮಿಯ ನವರಾತ್ರಿಯಲ್ಲಿ ದೇವಿಯ ಪುರಾಣ ಪ್ರವಚನ ನಡೆಯುತ್ತದೆ. ಚರ್ಮರೋಗಕ್ಕೆ ಇಲ್ಲಿಗೆ ಹರಕೆಹೊತ್ತರೆ ಗುಣಮುಖವಾಗುತ್ತದೆಯೆಂಬ ನಂಬಿಕೆ ಇಲ್ಲಿನವರದು.

‘ರಣದುಲ್ಲಾ ಖಾನ್‌ರನ್ನು ಯುದ್ಧದಲ್ಲಿ ಸೋಲಿಸುವುದಕ್ಕಾಗಿ ಈ ದೇವಿಯು ಶಿವಾಜಿ ಮಹಾರಾಜನಿಗೆ ಯುದ್ಧದ ಖಡ್ಗವನ್ನು ನೀಡಿದಳು. ಆ ಖಡ್ಗದಿಂದ ರಣದುಲ್ಲಾ ಖಾನನನ್ನು ಶಿವಾಜಿ ಸೋಲಿಸಿದ’ ಎಂಬ ನಂಬಿಕೆಗೆ ಪೂರಕವಾಗಿ ಹೊಳಲಮ್ಮನ ಗುಡಿಯ ಮೇಲ್ಭಾಗದಲ್ಲಿ ಶಿವಾಜಿ ಹೊಳಲಮ್ಮ ದೇವಿಯ ಕೈಯಿಂದ ಖಡ್ಗವನ್ನು ಪಡೆಯುವ ಕೆತ್ತನೆಯೂ ಇದೆ.

ಕೋಟೆ ಶಂಖುವಿನ ಆಕಾರದಲ್ಲಿದ್ದು ಇದೀಗ ಕೆತ್ತನೆಯ ಕಲ್ಲುಗಳು ನೆಲಸೇರಿವೆ. ಕಮಾನಿನ ಆಕಾರದ ನಾಲ್ಕೈದು ಪ್ರವೇಶ ದ್ವಾರಗಳು ಮಾತ್ರ ಇಂದಿಗೂ ಇವೆ. ಕೋಟೆಯ ಪಕ್ಕದಲ್ಲಿ ಹಿಂದಿನ ಕಾಲದ ಎರಡು ಶೌಚಾಲಯಗಳಿವೆ. ಗುಡ್ಡದ ಮೇಲೆ ಅಂದರೆ ಕೋಟೆಯ ನಡುವೆ ಕಲ್ಲುಗಳನ್ನು ತೋಡಿ ನಿರ್ಮಿಸಿದ ಬಾವಿಯೊಂದು ಸರ್ವಋತುಗಳಲ್ಲೂ ನೀರುಣಿಸುತ್ತದೆ. ರಾಜರ ಕೋವಿಗಳನ್ನು ಇಡುವ ದ್ವಾರ, ಸೈನಿಕರು ಬರುವುದನ್ನು ದೂರದಿಂದ ನೋಡಲು ಅನುಕೂಲವಾಗುವಂತೆ ಕೋಟೆಯ ಗೋಡೆಗಳಲ್ಲಿರುವ ಕಿಟಕಿಗಳು, ಯುದ್ಧದ ಸಮಯದಲ್ಲಿ ಮುರಿದು ಬಿದ್ದ ಕೋಟೆಯ ಗೋಡೆಗಳು, ಬಂದೂಕು, ಖಡ್ಗವನ್ನು ಇಡುವ ಸ್ಥಳ ಇವೆಲ್ಲಾ ಈ ಭೂಮಿಯಲ್ಲಿ ಯುದ್ಧ ನಡೆದಿದೆ ಎನ್ನುವುದಕ್ಕೆ ಇಂದಿಗೂ ಲಭ್ಯವಾಗುವ ಕುರುಹುಗಳು.

ಗುಡ್ಡದ ಮೇಲೆ ಉತ್ತರ ದಿಕ್ಕಿನಲ್ಲಿರುವ ಆಲದ ಮರವನ್ನು ಹಿಂದಿನ ಕಾಲದ